Fax: 08282-256262
E-mail:kuvempuacademic@gmail.com

Phone No - 08282-256149
Website:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಎಸಿ–5: 2651 :2020–21 ದಿನಾಂಕ:21–10–2020

## ಸುತ್ತೋಲೆ

**ವಿಷಯ: 2020–21ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ನಮೂದಿಸುವ ಬಗ್ಗೆ.**

ಉಲ್ಲೇಖ: ಸುತ್ತೋಲೆ ಸಂಖ್ಯೆ:ಎಸಿ–5:572:2019–20, ದಿನಾಂಕ:03–05–2019.

****

2017–18ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ನಮೂದಿಸುವ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಅದರಂತೆ 2020–21ನೇ ಶೈಕ್ಷಣಿಕ ಸಾಲಿನಲ್ಲಿಯು ಸಹ ಸ್ನಾತಕ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ನಮೂದಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. 2020–21ನೇ ಸಾಲಿನ **ಪ್ರಥಮ** ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕರ್ನಾಟಕ ಸರ್ಕಾರದ ಪದವಿ ಪೂರ್ವ ಮಂಡಳಿ/ಹೊರ ರಾಜ್ಯ ಪರೀಕ್ಷಾ ಮಂಡಳಿ ಹಾಗೂ ಸಿ.ಬಿ.ಎಸ್.ಇ.ಯಲ್ಲಿ ಉತ್ತೀರ್ಣರಾಗಿರುವ ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಕಾಲೇಜಿನಲ್ಲಿಯೇ ಪರಿಶೀಲಿಸಿ ದೃಢೀಕರಣವಾದ ನಂತರ ಈ ಹಿಂದೆ ಪರೀಕ್ಷಾ ವಿಭಾಗದಿಂದ ನೀಡಿದ ಸಾಫ್ಟ್‌ವೇರ್‌ನಲ್ಲಿ ಕೆಲವು ಮಾರ್ಪಾಡುಗಳೊಂದಿಗೆ ತಮ್ಮ ಕಾಲೇಜಿಗೆ ನೀಡಿದ User Name ಬಳಸಿಕೊಂಡು **ದಿನಾಂಕ:13–11–2020ರೊಳಗಾಗಿ ಕಡ್ಡಾಯವಾಗಿ** ಆನ್‌ಲೈನ್ ಮೂಲಕ ಸಾಫ್ಟ್‌ವೇರ್‌ನಲ್ಲಿ ನಮೂದಿಸಲು ಸೂಚಿಸಲಾಗಿದೆ. (ಆನ್‌ಲೈನ್‌ನಲ್ಲಿ ನಮೂದಿಸುವ ವಿಧಾನದ ಬಗ್ಗೆ ಕಳೆದ ಸಾಲಿನಲ್ಲಿ ಕಳುಹಿಸಿರುವ Flow chart ನ್ನು ಗಮನಿಸುವುದು). ವಿದ್ಯಾರ್ಥಿಗಳ ಹೆಸರುಗಳನ್ನು S.S.L.C. / 10ನೇ ತರಗತಿ ಅಂಕಪಟ್ಟಿಯಲ್ಲಿರುವಂತೆ ದಾಖಲಿಸತಕ್ಕದ್ದು.

ಆನ್‌ಲೈನ್ ಮೂಲಕ ದಾಖಲಿಸಲಾದ ವಿದ್ಯಾರ್ಥಿಗಳ ಪಟ್ಟಿಯನ್ನು ಸಾಫ್ಟ್‌ವೇರ್‌ನಿಂದ Download ಮಾಡಿ ಮುದ್ರಿಸಿಕೊಂಡು ವಿದ್ಯಾರ್ಥಿಗಳ ಮೂಲ ಅಂಕಪಟ್ಟಿ ಮತ್ತು ಪ್ರವೇಶ ಶುಲ್ಕಗಳೊಂದಿಗೆ ಉಲ್ಲೇಖಿತ (1)ರ ಅನುಬಂಧಗಳಲ್ಲಿ ಭರ್ತಿ ಮಾಡಿ ಸೂಕ್ತ ಪ್ರವೇಶಾತಿ ದಾಖಲೆಗಳನ್ನು ಪ್ರಾಂಶುಪಾಲರ ದೃಢೀಕರಣ ಮತ್ತು ಶಿಫಾರಸ್ಸಿನೊಂದಿಗೆ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸುವುದು ಸದರಿ ದಾಖಲೆಗಳನ್ನು ಪರಿಶೀಲಿಸಿ Online ಮೂಲಕ ಪ್ರವೇಶಾತಿಯನ್ನು ಅನುಮೋದಿಸಿ ಪರೀಕ್ಷಾ ವಿಭಾಗಕ್ಕೆ ಕಳುಹಿಸಲಾಗುವುದು. ನಂತರ ಪರೀಕ್ಷಾ ವಿಭಾಗದಿಂದ ನೊಂದಣಿ ಸಂಖ್ಯೆಯನ್ನು ನೀಡಲಾಗುವುದು.

Diploma in Commercial Practice ನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೇರವಾಗಿ ದ್ವಿತೀಯ ವರ್ಷದ ಬಿ.ಕಾಂ. / ಬಿ.ಬಿ.ಎ. ಪದವಿಗೆ ಪ್ರವೇಶವನ್ನು ಪಡೆದ **ಲ್ಯಾಟರಲ್‌ಎಂಟ್ರಿ** ವಿದ್ಯಾರ್ಥಿಗಳು ಹಾಗೂ ಅನ್ಯ ವಿಶ್ವವಿದ್ಯಾಲಯದಿಂದ ವರ್ಗಾವಣೆ ಪಡೆದು **ಮೂರನೇ ಮತ್ತು ಐದನೇ** ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಹಾಗೂ **ಮೂರನೇ ಮತ್ತು ಐದನೇ** ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದ ದಾಖಲಾತಿಗಳನ್ನು ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಎಲ್ಲಾ ವಿವರಗಳನ್ನು ಕಾಲೇಜಿನಲ್ಲಿಯೇ ಪರಿಶೀಲಿಸಿ ದೃಢೀಕರಣವಾದ ನಂತರ ಸೂಕ್ತ ದಾಖಲಾತಿಗಳೊಂದಿಗೆ ಪ್ರಾಂಶುಪಾಲರ ದೃಢೀಕರಣ ಮತ್ತು ಶಿಫಾರಸ್ಸಿನೊಂದಿಗೆ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸುವುದು. ವಿದ್ಯಾರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ಬಗ್ಗೆ ವ್ಯತ್ಯಾಸವಾದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.

ಉಲ್ಲೇಖಿತ ಸುತ್ತೋಲೆಯನ್ನು ಹಾಗೂ ವಿವಿಧ ನಮೂನೆಗಳನ್ನು 2020-21ನೇ ಶೈಕ್ಷಣಿಕ ಸಾಲಿನಲ್ಲಿಯೂ ಅನುಸರಿಸಲು ತಿಳಿಸಲಾಗಿದೆ. ಸದರಿ ಸುತ್ತೋಲೆಯನ್ನು ಹಾಗೂ ವಿವಿಧ ನಮೂನೆಗಳನ್ನು ವಿಶ್ವವಿದ್ಯಾಲಯದ ಅಂತರ್ ಜಾಲದಲ್ಲಿ (www.kuvempu.ac.in) ಪ್ರಕಟಿಸಲಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.

**Helpline No:81830-98136, 81830-98138.**

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

(ಡಾ. ಧರಣಿ ಕುಮಾರ್ ಪಿ.)
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451.
ಶಿವಮೊಗ್ಗ ಜಿಲ್ಲೆ.

21/10/2020

ಗೆ,

**ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸ್ನಾತಕ ಪದವಿಗಳ ಸಂಯೋಜಿತ / ನೇರ ಆಡಳಿತ / ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.**

**ಪ್ರತಿಗಳು:**

1. ಎಲ್ಲಾ ನಿಕಾಯಗಳ ಡೀನರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪರೀಕ್ಷಾಂಗ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ರಕ್ಷಣಾ ಕಡತ.
4. ಕಛೇರಿ ಪ್ರತಿ.

ರವಾನಿಸಿದೆ

Fax: 08282-256262
E-mail:kuvempuacademic@gmail.com

Phone No - 08282-256149
Website:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಎಸಿ–5: S72 :2019–20 ದಿನಾಂಕ:03–05–2019

## ಸುತ್ತೋಲೆ

ವಿಷಯ: ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳ 2019–20ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಅನುಸರಿಸಬೇಕಾದ ಸೂಚನೆಗಳು ಹಾಗೂ ನಿಗದಿತ ನಮೂನೆಗಳನ್ನು ಕಳುಹಿಸುತ್ತಿರುವ ಬಗ್ಗೆ.

ಉಲ್ಲೇಖ: 1) ವಿ. ವಿ. ಅಧಿಸೂಚನೆ ಸಂಖ್ಯೆ:ಕುವಿ:ಎಸಿ–3:ವೇಳಾಪಟ್ಟಿ:249:2019–20, ದಿನಾಂಕ:24–04–2019.
2) ಸರ್ಕಾರದ ಆದೇಶ ಸಂಖ್ಯೆ: ಸಕಇ 80 ಪಕವಿ 2013 ದಿನಾಂಕ:02–07–2013.

–******–

ವಿಶ್ವವಿದ್ಯಾಲಯ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜುಗಳಿಗೆ 2019–20ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಉಲ್ಲೇಖ (1)ರ ಅಧಿಸೂಚನೆಯನ್ವಯ ಈಗಾಗಲೇ ಪರಿಚಲಿಸಲಾಗಿದೆ.

ಮುಂದುವರಿದಂತೆ, 2019–20ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದ ನಿಬಂಧನೆಗಳು, ಸೂಚನೆಗಳು, ನಿಗದಿತ ಅರ್ಜಿ ನಮೂನೆಗಳನ್ನು ಈ ಸುತ್ತೋಲೆಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

1) ವಿಶ್ವವಿದ್ಯಾಲಯದ ಎಲ್ಲಾ ಸೂಚನೆಗಳನ್ನು : ಆದೇಶಗಳನ್ನು : ಸುತ್ತೋಲೆಗಳ ಮಾಹಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ. ಯಾವುದೇ ಆದೇಶಗಳ ಬಗ್ಗೆ ಸ್ಪಷ್ಟೀಕರಣ ಬೇಕಿದ್ದಲ್ಲಿ ವಿಶ್ವವಿದ್ಯಾಲಯವನ್ನು ಸಂಪರ್ಕಿಸುವುದು.

2) ಪ್ರಥಮ, ದ್ವಿತೀಯ, ತೃತೀಯ (ಒಂದನೆ, ಮೂರನೇ ಮತ್ತು ಐದನೇ ಸೆಮಿಸ್ಟರ್) ಪದವಿ ತರಗತಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಅನುಮೋದನೆ ಪಟ್ಟಿಯನ್ನು ತ್ರಿಪ್ರತಿಗಳಲ್ಲಿ ಕೋರ್ಸ್‌ವಾರು ಪ್ರತ್ಯೇಕವಾಗಿ ಸಿದ್ಧಪಡಿಸಿ ಸ್ಪಷ್ಟವಾದ ವಿವರ, ಮುಚ್ಚಳಿಕೆ ಹಾಗೂ ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು ಪ್ರವೇಶ ಪ್ರಕ್ರಿಯೆ ಮುಗಿದ ದಿನಾಂಕದಿಂದ (15) ದಿನಗಳೊಳಗಾಗಿ ಈ ಕಛೇರಿಗೆ ಕಳುಹಿಸುವುದು. ಪೂರ್ಣ ಮಾಹಿತಿಯನ್ನೊಳಗೊಂಡ ಹಾರ್ಡ್ ಹಾಗೂ ಸಾಫ್ಟ್ ಕಾಪಿಯನ್ನು (ಎಂ.ಎಸ್.ವರ್ಡ್) ಕಡ್ಡಾಯವಾಗಿ ಸಲ್ಲಿಸುವುದು.

3) ಇತರೆ ರಾಜ್ಯಗಳ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸುವುದು. ಅಲ್ಲದೆ, ಪ್ರವೇಶಾತಿ ಪೂರ್ವದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಹಾಗೂ 2018–19ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ. ಪಾಸಾದ ವಿದ್ಯಾರ್ಥಿಗಳು ಸಹ ವಿಶ್ವವಿದ್ಯಾಲಯದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.

4) ಅಂತಿಮವಾಗಿ ಈ ಕಛೇರಿಗೆ ಕಳುಹಿಸುವ ನಮೂನೆ, ಪ್ರಪತ್ರ ಹಾಗೂ ಇತರೆ ಪತ್ರಗಳಲ್ಲಿ ಯಾವುದೇ ತಿದ್ದುಪಡಿಗಳು ಇರಬಾರದು.

5) 2019–20ನೇ ಶೈಕ್ಷಣಿಕ ಸಾಲಿನ ಮುಂದುವರಿಕೆ ಸಂಯೋಜನಾ ಆದೇಶದ ಮೂಲ ಪ್ರತಿಯನ್ನು ಅನುಮೋದನಾ ಪಟ್ಟಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕು.

6) ರಾಜ್ಯದ ಇತರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ವರ್ಗಾವಣೆ ಪ್ರವೇಶವನ್ನು ಕುವೆಂಪು ವಿಶ್ವವಿದ್ಯಾಲಯದ ಪೂರ್ವಾನುಮತಿಯೊಂದಿಗೆ ನೀಡುವುದು.

7) (5)ನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಘಟಿಕೋತ್ಸವ ಶುಲ್ಕವನ್ನು ಪ್ರವೇಶ ಶುಲ್ಕದೊಂದಿಗೆ ಪಡೆಯಬಾರದು.

.....2

8) ಸರ್ಕಾರದ ಆದೇಶ ಸಂಖ್ಯೆ: ಸಕಇ 80 ಪಕವಿ 2013 ದಿನಾಂಕ:02-07-2013 ರನ್ವಯ, ಪೋಷಕರ ವಾರ್ಷಿಕ ವರಮಾನ ₹ 2.50 ಲಕ್ಷಗಳಿಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ : ಪಂಗಡದ ವಿದ್ಯಾರ್ಥಿಗಳ ಪ್ರವೇಶಾತಿ ಸಂದರ್ಭದಲ್ಲಿ ಶುಲ್ಕ ಪಾವತಿಸುವಂತೆ ಒತ್ತಾಯಿಸದಿರಲು ಉಲ್ಲೇಖ(2)ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಅಂತಹ ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆಯದೆ, ಸಕ್ಷಮ ಅಧಿಕಾರಿಗಳಿಂದ ಪಡೆದ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಿ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಮೂಲಕ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಪಾವತಿಸಬೇಕಾದ ಶುಲ್ಕಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆ ಮಾಡಿಕೊಳ್ಳಲು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸಲಾಗಿದೆ.

9) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 589 ಬಿಎಂಎಸ್ 2013 ದಿನಾಂಕ:05-10-2013 ರನ್ವಯ ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಧಿಸೂಚಿಸಿರುವ ಹಿಂದುಳಿದ ವರ್ಗಗಳ ಪ್ರವರ್ಗ-1 ರ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ₹ 2.50/- ಲಕ್ಷ ಹಾಗೂ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರುವ ಎಲ್ಲಾ ಧರ್ಮಗಳ ಪ್ರವರ್ಗ - 2ಬಿ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಪಾರ್ಸಿ ಮತ್ತು ಸಿಖ್) ಪ್ರವರ್ಗ-2ಎ, 3ಎ ಹಾಗೂ 3ಬಿ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ₹ 1.00 ಲಕ್ಷಕ್ಕಿಂತ ಕಡಿಮೆ ಇರುವ ಸಕ್ಷಮ ಅಧಿಕಾರಿಗಳಿಂದ ಪಡೆದ ಮೂಲ ಜಾತಿ ಹಾಗೂ ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದಲ್ಲಿ ಶುಲ್ಕ ವಿನಾಯತಿಯ ಶುಲ್ಕಗಳೂ ಸೇರಿದಂತೆ, ನಿಗದಿತ ಶುಲ್ಕಗಳನ್ನು ಪ್ರವೇಶಾತಿ ಸಮಯದಲ್ಲಿ ಆಯಾ ಶಿಕ್ಷಣ ಸಂಸ್ಥೆಗಳು/ ಕಾಲೇಜುಗಳು ಪಡೆಯಬಹುದು. ಆದರೆ, ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಮೆರಿಟ್ ಆಧರಿಸಿ ಅನುದಾನದ ಲಭ್ಯತೆಗೆ ಒಳಪಟ್ಟು ಆಯಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಜೂರಾತಿ ಪಡೆದು ಅಂತಹ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ NEFT/ RTGS ವ್ಯವಸ್ಥೆಯ ಮೂಲಕ ಹಣ ಜಮಾ ಮಾಡಲು ಆಯಾ ಕಾಲೇಜು ಶಿಕ್ಷಣ ಸಂಸ್ಥೆಗಳ/ ಕಾಲೇಜು ಪ್ರಾಂಶುಪಾಲರು ಅಗತ್ಯ ಕ್ರಮ ಕೈಗೊಳ್ಳುವುದು.

www.kareepass.gov.in ವೆಬ್‌ಸೈಟ್‌ನಲ್ಲಿ ಹಿಂದುಳಿದ ವರ್ಗಗಳ ನಿರ್ದೇಶನಾಲಯವು ಶುಲ್ಕ ವಿನಾಯಿತಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡಿರುವ ಮಾರ್ಗಸೂಚಿಗಳನ್ನು ಅನುಸರಿಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ. ಒಂದು ವೇಳೆ ಪ್ರವೇಶಾತಿ ಸಮಯದಲ್ಲಿ ₹ 2.50/- ಲಕ್ಷ ಆದಾಯ ಮಿತಿಯ ಪ್ರವರ್ಗ-1ರ ಹಾಗೂ ₹ 1.00 ಲಕ್ಷ ಆದಾಯ ಮಿತಿಯ ಪ್ರವರ್ಗ-2ಎ, 2ಬಿ, 3ಎ ಹಾಗೂ 3ಬಿ ಯ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಸಲ್ಲಿಸಿದ ಮೂಲ ಜಾತಿ ಹಾಗೂ ಆದಾಯ ಪ್ರಮಾಣ ಪತ್ರಗಳನ್ವಯ ಆಯಾ ಶಿಕ್ಷಣ ಸಂಸ್ಥೆಗಳ/ ಕಾಲೇಜು ಪ್ರಾಂಶುಪಾಲರು ಶುಲ್ಕ ವಿನಾಯತಿ ನೀಡಿ ಅಂತಹ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಹಿಂದುಳಿದ ವರ್ಗಗಳ ಇಲಾಖೆಗೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯತಿಯಡಿ ಮಂಜೂರು ಮಾಡಿದ ಶುಲ್ಕಗಳನ್ನು ಆಯಾ ಶಿಕ್ಷಣ ಸಂಸ್ಥೆಗಳ/ ಕಾಲೇಜುಗಳ ಬ್ಯಾಂಕ್ ಖಾತೆಗಳಿಗೆ ಆಯಾ ಜಿಲ್ಲಾ ಹಿಂದುಳಿದ ವರ್ಗಗಳ ಇಲಾಖೆಯು ನೇರವಾಗಿ NEFT/RTGS ವ್ಯವಸ್ಥೆಯ ಮೂಲಕ ಜಮಾ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ.

**ಸ್ನಾತಕ ಪದವಿಗಳ ಪರಿಷ್ಕರಣೆಗೊಂಡಿರುವ ಪಠ್ಯಕ್ರಮಗಳನ್ನು ದಿನಾಂಕ:14-05-2019ರಂದು ಜರುಗುವ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯಲ್ಲಿ ಅನುಮೋದನೆಗೆ ಮಂಡಿಸಿದೆ. ಸದರಿ ಅನುಮೋದಿತ ಪಠ್ಯಕ್ರಮಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ನಂತರದಲ್ಲಿ ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ. ಸದರಿ ಪಠ್ಯಕ್ರಮಗಳನ್ನು 2019-20ನೇ ಸಾಲಿನಿಂದ ಜಾರಿಗೊಳಿಸಲು ತಿಳಿಸಲಾಗಿದೆ. ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಅಧ್ಯಯನ ಮಂಡಳಿ ಮುಖ್ಯಸ್ಥರುಗಳನ್ನು ಸಂಪರ್ಕಿಸುವುದು.**

.....3

<u>ವಿ.ಸೂ :</u>

1. ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಶುಲ್ಕ ವಿನಾಯಿತಿ ಪಾವತಿಯಲ್ಲಿ ವ್ಯತ್ಯಾಸವಾದಲ್ಲಿ, ವ್ಯತ್ಯಾಸದ ಶುಲ್ಕವನ್ನು ಅಯಾ ವಿದ್ಯಾರ್ಥಿ/ನಿಯು ಪಾವತಿಸುವ ಷರತ್ತಿಗೊಳಪಟ್ಟಿರುತ್ತದೆ.
2. ಪ್ರವರ್ಗವಾರು ಜಾತಿಗಳ ಪಟ್ಟಿ ಮತ್ತು ಕುಟುಂಬದ ವಾರ್ಷಿಕ ವರಮಾನವು ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.

(ಡಾ. ಧರಣಿ ಕುಮಾರ್ ಪಿ.)
**ಉಪ ಕುಲಸಚಿವ**
**ಶೈಕ್ಷಣಿಕ ವಿಭಾಗ,**
**ಕುವೆಂಪು ವಿಶ್ವವಿದ್ಯಾನಿಲಯ**

ಗೆ,

ಪ್ರಾಂಶುಪಾಲರು, ಶಿವಮೊಗ್ಗ : ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸಂಯೋಜಿತ : ನೇರ[illegible]
ಶಿವಮೊಗ್ಗ ಜಿಲ್ಲೆ.
03/5/13

ಪ್ರತಿಗಳು:

1) ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001.
3) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ನಂ.16/ಡಿ. ದೇವರಾಜ ಅರಸು ಭವನ, ಮಿಲ್ಲರ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು.
4) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು-560 001.
5) ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು.
6) ಆಯುಕ್ತರು, ಸಮಾಜ ಕಲ್ಯಾಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, 5ನೇ ಮಹಡಿ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು-560 001 .
7) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಶಿವಮೊಗ್ಗ : ಚಿಕ್ಕಮಗಳೂರು ಜಿಲ್ಲೆ.
8) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ : ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ : ಚಿಕ್ಕಮಗಳೂರು ಜಿಲ್ಲೆ.
9) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ.
10) ಎಲ್ಲಾ ಸ್ಕೂಲ್ ಡೈರೆಕ್ಟರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
11) ಎಲ್ಲಾ ನಿಕಾಯದ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
12) ಕುಲಸಚಿವರು(ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
13) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
14) ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
15) **ನಿರ್ದೇಶಕರು, ಯು.ಸಿ.ಸಿ.ಎಫ್. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.**
16) ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ನಿರ್ದೇಶಕರು, ಪಿ.ಎಂ.ಇ. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ,ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
20) ನಿರ್ದೇಶಕರು, ಪ್ರಸಾರಾಂಗ ವಿಭಾಗ,ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
21) ಸಂಚಾಲಕರು, ಪ.ಜಾ:ಪ.ಪಂ: ಘಟಕ,ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
22) ಸಂಚಾಲಕರು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಘಟಕ,ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
23) ಸಾರ್ವಜನಿಕ ಸಂಪರ್ಕಾಧಿಕಾರಿಗಳು,ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
24) ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
25) ರಕ್ಷಣಾ ಕಡತ.
26) ಕಛೇರಿ ಪ್ರತಿ.

**ಕುವೆಂಪು ವಿಶ್ವವಿದ್ಯಾಲಯ**

**ಬಿ.ಎ./ಬಿ.ಎಸ್ಸಿ/ಬಿ.ಕಾಂ./ಬಿ.ಬಿ.ಎ./ಬಿ.ಸಿ.ಎ./ಬಿ.ಎಸ್.ಡಬ್ಲ್ಯೂ/ಬಿ.ಬಿ.ಎ.(ಟೂರಿಸಂ & ಟ್ರಾವೆಲ್) ಹಾಗೂ ಇತರೆ ಸ್ನಾತಕ ಪದವಿಗಳಿಗೆ ಅನ್ವಯವಾಗುವಂತೆ ಈ ಕೆಳಕಂಡ ಸೂಚನೆಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ/ಘಟಕ/ಸ್ವಾಯತ್ತ ಹಾಗೂ ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳು ತಪ್ಪದೆ ಪಾಲಿಸಲು ಸೂಚಿಸಲಾಗಿದೆ.**

**ವೇಳಾ ಪಟ್ಟಿ : ಶುಲ್ಕ ಪಾವತಿ**

1) ಕಾಲೇಜಿನ ಪ್ರಾಂಶುಪಾಲರು / ಮುಖ್ಯಸ್ಥರು ವಿಶ್ವವಿದ್ಯಾಲಯವು ನಿಗದಿಪಡಿಸಿದ 2019-20ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಅಧ್ಯಾಪಕರುಗಳ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ಬರುವಂತೆ ಕಡ್ಡಾಯವಾಗಿ ಪ್ರಕಟಿಸಬೇಕು.

2) ಈಗಾಗಲೇ ಪರಿಚಲಿಸಲಾಗಿರುವ 2019-20ನೇ ಶೈಕ್ಷಣಿಕ ವೇಳಾಪಟ್ಟಿಗನುಗುಣವಾಗಿ ನಿಗದಿತ ಅವಧಿಯೊಳಗೆ ಎಲ್ಲಾ ತರಗತಿಗಳ ಪ್ರವೇಶಗಳನ್ನು ಪೂರ್ಣಗೊಳಿಸಬೇಕು.

3) ವಿಶ್ವವಿದ್ಯಾಲಯದ ನಿಯಮಗಳನುಸಾರ ಭೋಧನೆ ಹಾಗೂ ಪರೀಕ್ಷೆಗಳನ್ನು ನಡೆಸಬೇಕು.

4) 2019-20ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಪದವಿ ಪ್ರವೇಶಕ್ಕಾಗಿ ಕೆಳಕಂಡಂತೆ ದಿನಾಂಕಗಳನ್ನು ನಿಗದಿಗೊಳಿಸಲಾಗಿದೆ.

| | | |
|---|---|---|
| 1 | ದಂಡ ಶುಲ್ಕವಿಲ್ಲದೆ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಕಡೆಯ ದಿನಾಂಕ | 16-07-2019 |
| 2 | ₹.200/- ದಂಡ ಶುಲ್ಕದೊಂದಿಗೆ ಪ್ರವೇಶ ಪಡೆಯಲು ಕಡೆಯ ದಿನಾಂಕ | 31-07-2019 |

**ದ್ವಿತೀಯ / ತೃತೀಯ ವರ್ಷ (3ನೇ : 5ನೇ ಸೆಮಿಸ್ಟರ್)**

| | | |
|---|---|---|
| 1 | ದಂಡ ಶುಲ್ಕವಿಲ್ಲದೆ ದ್ವಿತೀಯ ವರ್ಷದ ಮೂರನೇ ಸೆಮಿಸ್ಟರ್‌ಗೆ ಹಾಗೂ ಮೂರನೇ ವರ್ಷದ ಐದನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಕಡೆಯ ದಿನಾಂಕ | 15-06-2019 |
| 2 | ₹.200/- ದಂಡ ಶುಲ್ಕದೊಂದಿಗೆ ಪ್ರವೇಶ ಪಡೆಯಲು ಕಡೆಯ ದಿನಾಂಕ | 01-07-2019 |

5) ನಿಗದಿತ ಕೊನೆಯ ದಿನಾಂಕದ ನಂತರ ಪ್ರವೇಶಗಳನ್ನು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

6) ದ್ವಿತಿಯ ಪಿ.ಯು.ಸಿ. ಪೂರಕ ಪರೀಕ್ಷೆಯ ಫಲಿತಾಂಶ ಪ್ರಕಟವಾದ ದಿನಾಂಕದಿಂದ 07 ದಿನಗಳವರೆಗೆ ದಂಡ ಶುಲ್ಕವಿಲ್ಲದೆ ಅರ್ಹ ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶವನ್ನು ಪಡೆದುಕೊಳ್ಳುವುದು. ಹೀಗೆ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಯು ನಿಯಮಾನುಸಾರ 75 % ರಷ್ಟು ಹಾಜರಾತಿಯನ್ನು ಹೊಂದಿರ ತಕ್ಕದ್ದು ಆಯಾ ಕಾಲೇಜುಗಳ ಪ್ರಾಂಶುಪಾಲರು ಈ ಬಗ್ಗೆ ನಿಗಾ ವಹಿಸಲು ಸೂಚಿಸಲಾಗಿದೆ.

7) ಸ್ನಾತಕ ಪದವಿಗಳ ಪ್ರವೇಶ ಪ್ರಕ್ರಿಯೆಯ ದಿನಾಂಕ ಮುಕ್ತಾಯಗೊಂಡ ನಂತರ ಪ್ರಾಂಶುಪಾಲರುಗಳು, ವಿದ್ಯಾರ್ಥಿಗಳಿಗೆ ಶಿಫಾರಸ್ಸು ಪತ್ರವನ್ನು ನೀಡಿ ವಿಶ್ವವಿದ್ಯಾನಿಲಯದ ಅನುಮತಿಗಾಗಿ ಕಳುಹಿಸಬಾರದು. ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಿದಲ್ಲಿ ಪಠ್ಯಕ್ರಮ ಭೋಧನೆಯಿಂದ ವಂಚಿತರಾಗುವುದಲ್ಲದೆ ನಿಯಮಾನುಸಾರ 75 % ರಷ್ಟು ಹಾಜರಾತಿ ಪಡೆಯಲು ಸಾಧ್ಯವಾಗುವುದಿಲ್ಲ.

8) ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ವಿಶ್ವವಿದ್ಯಾಲಯಕ್ಕೆ ಸಂದಾಯವಾಗಬೇಕಾದ ಶುಲ್ಕಗಳನ್ನು ಪ್ರವೇಶದ ಕೊನೆಯ ದಿನಾಂಕದ ನಂತರದ **ಮೂರು ದಿನಗಳೊಳಗಾಗಿ** ಈ ಕಛೇರಿಗೆ ಕಳುಹಿಸಲು ಕ್ರಮಕೈಗೊಳ್ಳಬೇಕು ತಪ್ಪಿದಲ್ಲಿ ದಂಡ ಶುಲ್ಕ ವಿಧಿಸಲಾಗುವುದು.

**ವಿಶೇಷ ಸೂಚನೆ:** ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ –

1. ದಂಡ ಶುಲ್ಕವಿಲ್ಲದೆ ಪಡೆದ ಒಟ್ಟು ಮೊತ್ತವನ್ನು ದಿನಾಂಕ:19-07-2019ರೊಳಗಾಗಿ ಹಾಗೂ ದಂಡ ಶುಲ್ಕದೊಂದಿಗೆ ಪಡೆದ ಮೊತ್ತವನ್ನು ದಿನಾಂಕ:03-08-2019ರೊಳಗಾಗಿ ವಿಶ್ವವಿದ್ಯಾಲಯದ ಖಾತೆಗೆ ಪಾವತಿಸತಕ್ಕದ್ದು.
2. ದ್ವಿತೀಯ / ತೃತೀಯ ವರ್ಷದ ವಿದ್ಯಾರ್ಥಿಗಳಿಗೆ – ದಂಡ ಶುಲ್ಕವಿಲ್ಲದೆ ಪಡೆದ ಒಟ್ಟು ಮೊತ್ತವನ್ನು ದಿನಾಂಕ:19-06-2019ರೊಳಗಾಗಿ ಹಾಗೂ ದಂಡ ಶುಲ್ಕದೊಂದಿಗೆ ಪಡೆದ ಮೊತ್ತವನ್ನು ದಿನಾಂಕ:04-07-2019ರೊಳಗಾಗಿ ವಿಶ್ವವಿದ್ಯಾಲಯದ ಖಾತೆಗೆ ಪಾವತಿಸತಕ್ಕದ್ದು.

9) 1ನೇ : 3ನೇ : 5ನೇ ಸೆಮಿಸ್ಟರ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರವೇಶ ಪಡೆಯಲು ನಿಗದಿಪಡಿಸಿರುವ ದಿನಾಂಕದಿಂದ 15 ದಿನಗಳೊಳಗಾಗಿ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾರ್ಡ್ ಮತ್ತು ಸಾಫ್ಟ್‌ಕಾಪಿ (ಪೆನ್ ಡ್ರೈವ್) ಯೊಂದಿಗೆ ಅನುಮೋದನೆಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.

10) ಪ್ರವೇಶಾತಿಯ ನಂತರ ಯಾವುದೇ ಕಾರಣಕ್ಕೆ ವಿದ್ಯಾರ್ಥಿಗಳು ಪ್ರವೇಶ ರದ್ದುಪಡಿಸಿಕೊಂಡಲ್ಲಿ ವಿಶ್ವವಿದ್ಯಾಲಯಕ್ಕೆ ಪಾವತಿಸಿರುವ ಯಾವುದೇ ಶುಲ್ಕಗಳನ್ನು ಹಿಂಪಾತಿಸಲು ಅವಕಾಶವಿರುವುದಿಲ್ಲ.

11) ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾಗಿರುವ ಯಾವುದೇ ಶುಲ್ಕಗಳನ್ನು ಡಿ.ಡಿ.ಯ ಮೂಲಕ ಕಳುಹಿಸುವ ಬದಲು ವಿದ್ಯುನ್ಮಾನ ಮಾಧ್ಯಮದ (ಎಲೆಕ್ಟ್ರಾನಿಕ್ಸ್ ಟ್ರಾನ್ಸ್‌ಫರ್) (ಎನ್.ಇ.ಎಫ್.ಟಿ/ಆರ್.ಟಿ.ಜಿ.ಎಸ್) ಮೂಲಕ **"ಹಣಕಾಸು ಅಧಿಕಾರಿಗಳು ಕುವೆಂಪು ವಿಶ್ವವಿದ್ಯಾಲಯ" ಇವರ ಪದನಾಮದಲ್ಲಿ ಬ್ಯಾಂಕಿನ ಖಾತೆ ಸಂಖ್ಯೆ:54023036291, ಐ.ಎಫ್.ಎಸ್.ಸಿ. ಸಂಖ್ಯೆ: SBIN0040759, "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ" ಜ್ಞಾನಸಹ್ಯಾದ್ರಿ ಶಾಖೆಗೆ** ಪಾವತಿಯಾಗುವಂತೆ ಸಂದಾಯ ಮಾಡಿ ಚಲನ್‌ನ ಒಂದು ಮೂಲ ಪ್ರತಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಈ ಕಛೇರಿಗೆ ಕಳುಹಿಸಲು ತಿಳಿಸಲಾಗಿದೆ.

12) ವಿಶ್ವವಿದ್ಯಾಲಯದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ನಮೂನೆಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಮತ್ತು ಸೂಚನೆಗಳನ್ನು ಪಾಲಿಸಲು ತಿಳಿಸಲಾಗಿದೆ. ಬ್ಯಾಂಕ್ ಚಲನ್‌ಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಡೌನ್‌ಲೋಡ್ ಮಾಡಿಕೊಂಡು ಶುಲ್ಕವನ್ನು ಪಾವತಿಸುವುದು. ನಿಗದಿತ ಶುಲ್ಕ ವಿವರಗಳ ಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

## II.) ಪ್ರವೇಶ ಮಿತಿ

1) ನಿಗದಿತ ಕೊನೆಯ ದಿನಾಂಕದ ನಂತರ ಉಳಿದ ಸ್ಥಾನಗಳನ್ನು ಭರ್ತಿ ಮಾಡಲು **ವಿಶ್ವವಿದ್ಯಾಲಯದ ಅನುಮತಿ ಪಡೆಯಬೇಕು. ವಿಶ್ವವಿದ್ಯಾಲಯದ ಅನುಮತಿ ಇಲ್ಲದೆ ಯಾವುದೇ ಪ್ರವೇಶವನ್ನು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.**
2) ಸ್ನಾತಕ ಪದವಿ ತರಗತಿಗಳಿಗೆ ವಿಶ್ವವಿದ್ಯಾಲಯದ ಪ್ರಚಲಿತ ನಿಯಮದನುಸಾರ ಪ್ರವೇಶಾತಿ ನೀಡಬೇಕು ಯಾವುದೇ ಕಾರಣಕ್ಕೂ ನಿಯಮವನ್ನು ಉಲ್ಲಂಘಿಸಬಾರದು ನಿಯಮಗಳನುಸಾರ ಅರ್ಹರಾದ ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದಾರೆಂದು ದೃಢಪಡಿಸಿಕೊಳ್ಳುವ ಹೊಣೆ ಕಾಲೇಜಿನ ಪ್ರಾಂಶುಪಾಲರು /ಮುಖ್ಯಸ್ಥರದ್ದಾಗಿರುತ್ತದೆ.

## III.) ಹಾಜರಾತಿ

1) ಯು.ಜಿ.ಸಿ. ನಿಯಮಾನುಸಾರ **75% ರಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ** ಹಾಜರಾತಿ ಕಡಿಮೆ ಬಂದಲ್ಲಿ ವಿಶ್ವವಿದ್ಯಾಲಯವು ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂಬ ಬಗ್ಗೆ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಬರೆಯಿಸಿಕೊಳ್ಳಬೇಕು. ಈ ಬಗ್ಗೆ ಅನುಬಂಧ-VII ರ ನಮೂನೆಯನ್ನು ಭರ್ತಿಮಾಡಿ ಕಾಲೇಜಿನಲ್ಲಿ ಇರಿಸಿಕೊಳ್ಳತಕ್ಕದ್ದು ಹಾಗೂ ವಿಶ್ವವಿದ್ಯಾಲಯ ಬಯಸಿದಾಗ ದಾಖಲೆಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು.
2) ಸ್ನಾತಕ ಪದವಿ ಕೋರ್ಸ್‌ಗಳನ್ನು ನಿಯಂತ್ರಿಸುವ ವಿನಿಯಮಗಳನುಸಾರ ಸಂಬಂಧಿಸಿದ ಕೋರ್ಸ್‌ಗಳ ದ್ವಿಗುಣ ಅವಧಿಯೊಳಗೆ (Double the Duration) ಅಂದರೆ ಪ್ರಥಮ ಸೆಮಿಸ್ಟರ್‌ನಲ್ಲಿ ಪ್ರವೇಶ ಪಡೆದ ಆರು ವರ್ಷಗಳೊಳಗಾಗಿ ಪ್ರವೇಶಾತಿ ಹೊಂದಿದ ಪದವಿ ವ್ಯಾಸಂಗವನ್ನು ಪೂರೈಸಲು ಇರುವ ಗರಿಷ್ಠ ಅವಕಾಶದ ಬಗ್ಗೆ ವಿದ್ಯಾರ್ಥಿಗಳಿಂದ ಮುಚ್ಚಳಿಕೆಯನ್ನು ಕಡ್ಡಾಯವಾಗಿ ಪಡೆದು ಕಾಲೇಜಿನಲ್ಲಿಯೇ ಇರಿಸಿಕೊಳ್ಳತಕ್ಕದ್ದು ವಿಶ್ವವಿದ್ಯಾಲಯ ಬಯಸಿದಾಗ ದಾಖಲೆಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು.
3) ಪ್ರಾಂಶುಪಾಲರು / ಮುಖ್ಯಸ್ಥರುಗಳು ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಪ್ರವೇಶ ಮಿತಿ ಮತ್ತು ವಿಷಯ ಸಮೂಹಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಯೋಜನೆ ಅಥವಾ ಅನುಮೋದನೆ ಪಡೆಯದ ವಿಷಯ ಸಮೂಹಗಳಿಗೆ ಪ್ರವೇಶ ನೀಡಿದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಪ್ರವೇಶ ಅನುಮೋದನೆಯನ್ನು ತಡೆಹಿಡಿಯಲಾಗುವುದು.

...3

4) ವಿಶ್ವವಿದ್ಯಾಲಯದ ಹಾಜರಾತಿ ನಿಯಮಗಳನುಸಾರ ಹಾಜರಾತಿ ನಿರ್ಬಂಧಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಅದನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

**IV.) ಪದವಿ ಪ್ರವೇಶಾರ್ಹತೆ : ವರ್ಗಾವಣೆ ಪ್ರವೇಶ : ಮರುಪ್ರವೇಶದ**

1) ಕರ್ನಾಟಕ ಸರ್ಕಾರದ ಪದವಿ ಪೂರ್ವ ಶಿಕ್ಷಣ ಮಂಡಳಿ ನಡೆಸಿದ 10+02 ಹಂತದ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು ವಿಶ್ವವಿದ್ಯಾಲಯದ ಪದವಿಗಳ ಪ್ರವೇಶಾತಿಗೆ ಅರ್ಹತೆ ಹೊಂದಿರುತ್ತಾರೆ.

2) ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ. ಕುವಿ:ಶೈವಿ:ಎಸಿ-1:825:2011-12 ದಿನಾಂಕ 28-07-2011ರಲ್ಲಿ ತಿಳಿಸಿರುವಂತೆ ಎಸ್.ಎಸ್.ಎಲ್.ಸಿ. ನಂತರ ಎರಡು ವರ್ಷದ ಜೆ.ಓ.ಸಿ.ಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಎಸ್.ಎಸ್.ಎಲ್.ಸಿ. ನಂತರ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಎರಡು ವರ್ಷಗಳ ಐ.ಟಿ.ಐ.ನಲ್ಲಿ (Electrical, Electronics, Fitter, Computer Training) ತೇರ್ಗಡೆಯಾದ ವಿದ್ಯಾರ್ಥಿಗಳು ಬಿ.ಕಾಂ., ಬಿ.ಎ., ಬಿ.ಬಿ.ಎ., ಬಿ.ಎಸ್ಸಿ., ಬಿ.ಸಿ.ಎ. ಪದವಿಗಳ ಪ್ರವೇಶಾತಿಗೆ ಅರ್ಹತೆ ಹೊಂದಿರುತ್ತಾರೆ.

3) ಹೊರ ರಾಜ್ಯ ಅಥವಾ ಹೊರ ದೇಶದ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವಾಗ ಅಂತಹ ವಿದ್ಯಾರ್ಥಿಗಳು ಮೊದಲು ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರವನ್ನು(Eligibility Certificate) ಪಡೆಯಬೇಕು. ಅರ್ಹತಾ ಪ್ರಮಾಣ ಪತ್ರ ಪಡೆದ ನಂತರವೇ ಪ್ರವೇಶ ಮಾಡಿಕೊಳ್ಳತಕ್ಕದ್ದು ಹಾಗೂ ಹೊರರಾಜ್ಯದ ಶಿಕ್ಷಣ ಮಂಡಳಿಯಿಂದ ಪಡೆದ ಅಂಕಪಟ್ಟಿಯ ನೈಜತೆಯನ್ನು ಪರಿಶೀಲಿಸಿ ಪ್ರವೇಶ ನೀಡುವ ಪೂರ್ಣ ಜವಾಬ್ದಾರಿ ಪ್ರಾಂಶುಪಾಲರದ್ದಾಗಿರುತ್ತದೆ.

4) ಪ್ರವೇಶಾತಿಯ ನಂತರ ವಿದ್ಯಾರ್ಥಿಗಳು ತಮ್ಮ ಪಾಲಕರ ವರ್ಗಾವಣೆ ಅಥವಾ ವಿವಾಹ ಪ್ರಯುಕ್ತ ಅಥವಾ ಇನ್ನಿತರೆ ಅನಿವಾರ್ಯ ಕಾರಣಗಳಿಂದಾಗಿ ಕಾಲೇಜು ಬದಲಾವಣೆ ಬಯಸಿದಲ್ಲಿ ಅಂತಹ ಪ್ರಸ್ತಾವನೆಗಳನ್ನು ಅನುಬಂಧ-III ರಲ್ಲಿ ಭರ್ತಿಮಾಡಿ ವಿದ್ಯಾರ್ಥಿಗಳು ಪಡೆದಿರುವ ಹಾಜರಾತಿ ತಃಖ್ತೆಯೊಂದಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿಗಾಗಿ ಸಲ್ಲಿಸಬೇಕು.

5) ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವರ್ಗಾವಣೆ ಪ್ರವೇಶ ಪಡೆಯಲು ಪ್ರಾಂಶುಪಾಲರು ಶಿಫಾರಸ್ಸು ಮಾಡುವಾಗ ವಿದ್ಯಾರ್ಥಿಗಳು ಈ ಹಿಂದೆ ಅಭ್ಯಸಿಸಿದ ವಿಷಯಗಳು ವರ್ಗಾವಣೆಗೊಳ್ಳುವ ಕಾಲೇಜಿನಲ್ಲಿ ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಂಡು ಶಿಫಾರಸ್ಸು ಮಾಡತಕ್ಕದ್ದು. ಒಂದು ವೇಳೆ ವ್ಯತಿರಿಕ್ತವಾಗಿ ಶಿಫಾರಸ್ಸು ಮಾಡಿದಲ್ಲಿ ವಿದ್ಯಾರ್ಥಿಗಳಿಗಾಗುವ ತೊಂದರೆಗಳಿಗೆ ಕಾಲೇಜಿನ ಪ್ರಾಂಶುಪಾಲರೇ ಹೊಣೆಯಾಗಬೇಕಾಗುತ್ತದೆ. ಅಲ್ಲದೆ ಅಂತಹ ವಿದ್ಯಾರ್ಥಿಗಳ ಪ್ರವೇಶವನ್ನು ತಡೆಹಿಡಿಯಲಾಗುವುದು.

6) ಪ್ರವೇಶಾತಿಯ ನಂತರ ವಿದ್ಯಾರ್ಥಿಯು ಅನಿವಾರ್ಯ ಕಾರಣಗಳಿಂದ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಿ ಒಂದು ಅಥವಾ ಎರಡು ವರ್ಷದ ಅಂತರದ ತರುವಾಯ ಮರುಪ್ರವೇಶ ಪಡೆಯಲು ಇಚ್ಛಿಸಿದಲ್ಲಿ ಅದಕ್ಕೆ ಕಾರಣವೇನೆಂಬುದರ ಕುರಿತು ಸೂಕ್ತ ವಿವರಣೆಯನ್ನು ಪಡೆದು, ವಿದ್ಯಾರ್ಥಿಯು ಈ ಹಿಂದೆ ಪ್ರವೇಶ ಹೊಂದಿದ ಸ್ಕೀಂ ಮತ್ತು ಬರೆದಿರುವ ಪರೀಕ್ಷಾ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ ವಿಶ್ವವಿದ್ಯಾಲಯಕ್ಕೆ ಅನುಮತಿಗಾಗಿ ಕಳುಹಿಸಬೇಕು.

7) ವರ್ಗಾವಣೆ / ಮರುಪ್ರವೇಶದ ಅರ್ಜಿಗಳಿಗೆ ಶಿಫಾರಸ್ಸು ಮಾಡುವ ಸಂದರ್ಭದಲ್ಲಿ ಭಾಷೆ : ಐಚ್ಛಿಕ ವಿಷಯಗಳ ಪೂರ್ಣ ವಿವರಣೆ ಹಾಗೂ ಪ್ರವೇಶ ಪಡೆದ ಶೈಕ್ಷಣಿಕ ವರ್ಷದ ವಿವರ ನೀಡಬೇಕು. ಇಲ್ಲದಿದ್ದಲ್ಲಿ ಶಿಫಾರಸ್ಸನ್ನು ಪರಿಗಣಿಸಲಾಗುವುದಿಲ್ಲ.(ಉದಾಹರಣೆ ಬಿ.ಕಾಂ. ಕಡ್ಡಾಯ ವಿಷಯಗಳು ಎಂದು ನಮೂದಿಸಲಾಗುತ್ತಿದ್ದು, ಇದರ ಬದಲಿಗೆ ಆಯಾ ಕಾಲೇಜುಗಳಲ್ಲಿ ಬೋಧಿಸುವ ಬಿ.ಕಾಂ. ಪದವಿಯ ಐಚ್ಛಿಕ ವಿಷಯಗಳ ಪೂರ್ಣ ವಿವರ ನೀಡುವುದು)

**V.) ವಲಸೆ ಪ್ರಮಾಣ ಪತ್ರ:**

ವಲಸೆ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಥಿಯು ಎಲ್ಲಾ ಸೆಮಿಸ್ಟರ್ / ನಾನ್‌ಸೆಮಿಸ್ಟರ್‌ಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಹಾಗೂ ಕಾಲೇಜಿನಿಂದ ಪಡೆದ ಮೂಲ **"ಬೇಬಾಕಿ ಪತ್ರ ಅಥವಾ ವರ್ಗಾವಣೆ ಪತ್ರ"** ದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ವಿದ್ಯಾರ್ಥಿಗಳಿಗೆ ವಲಸೆ ಪ್ರಮಾಣಪತ್ರ ಪಡೆಯಲು ಅಗತ್ಯವಿರುವ ದಾಖಲೆಗಳ ಕುರಿತು ಕಾಲೇಜಿನ ಪ್ರಕಟಣಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ತಿಳಿಸಲಾಗಿದೆ.

.....4

**VI.) ಭಾಷೆ/ಐಚ್ಛಿಕ ವಿಷಯಗಳ ಬದಲಾವಣೆ;**

1) ಭಾಷೆ / ಐಚ್ಛಿಕ ವಿಷಯಗಳ ಬದಲಾವಣೆಯ ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯದ ವಿನಿಯಮ 11ರ ಪ್ರಕಾರ 1ನೇ /2ನೇ ಹಾಗೂ 3ನೇ ಸೆಮಿಸ್ಟರ್ ಪದವಿಯ ವಿದ್ಯಾರ್ಥಿಗಳು ನಿಗದಿತ ನಮೂನೆಯಲ್ಲಿ ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ ತರಗತಿಗಳು ಪ್ರಾರಂಭವಾದ 30 ದಿನಗಳೊಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪುರಸ್ಕರಿಸಲಾಗುವುದಿಲ್ಲಾ.
2) ಭಾಷೆ / ಐಚ್ಛಿಕ ವಿಷಯ ಬದಲಾವಣೆ ನಮೂನೆಯನ್ನು ಈ ಕಛೇರಿಗೆ ಕಳುಹಿಸುವಾಗ ಭಾಷೆಯ ಮತ್ತು ವಿಷಯ ಸಮೂಹದ ಸಂಕ್ಷಿಪ್ತ ವಿವರಣೆಯನ್ನು ನೀಡುವುದು.
3) ವಿಶ್ವವಿದ್ಯಾಲಯದ ಸಂಯೋಜನೆ ಪಡೆದ ಭಾಷೆಗಳನ್ನು ವಿದ್ಯಾರ್ಥಿಗಳಿಗೆ ನಿಗದಿಪಡಿಸಬೇಕು. ಸಂಯೋಜನೆಗೊಳ್ಳದ ಭಾಷೆಗೆ ವಿದ್ಯಾರ್ಥಿಗಳಿಗೆ ಅನಿವಾರ್ಯ ಕಾರಣಗಳಿಂದ ನೀಡಬೇಕಾಗಿ ಬಂದಲ್ಲಿ ವಿಶ್ವವಿದ್ಯಾಲಯದ ಪೂರ್ವಾನುಮತಿಯನ್ನು ಪಡೆಯಬೇಕು.

**VII.) ಇತರೆ ವಿಷಯಗಳು.**

1) ಸ್ನಾತಕ ಪದವಿ ವಿನಿಯಮದ ಪ್ರಕಾರ ಮೂರನೇ ಸೆಮಿಸ್ಟರ್‌ಗೆ ಪ್ರವೇಶವನ್ನು ಹೊಂದಲು 01 ಮತ್ತು 02ನೇ ಸೆಮಿಸ್ಟರ್‌ನ ಒಟ್ಟು ವಿಷಯಗಳಲ್ಲಿ 40 % ರಷ್ಟು ವಿಷಯಗಳಲ್ಲಿ ಹಾಗೂ 05ನೇ ಸೆಮಿಸ್ಟರ್ ಪ್ರವೇಶಕ್ಕೆ 01, 02, 03 ಮತ್ತು 04ನೇ ಸೆಮಿಸ್ಟರ್‌ಗಳ ಒಟ್ಟು ವಿಷಯಗಳಲ್ಲಿ 40 % ರಷ್ಟು ವಿಷಯಗಳಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. ಮೇಲ್ಕಂಡಂತೆ ಅರ್ಹತೆಯನ್ನು ಖಚಿತಪಡಿಸಿಕೊಂಡು 03 ಮತ್ತು 05ನೇ ಸೆಮಿಸ್ಟರ್ ಪ್ರವೇಶ ಅನುಮೋದನೆ ಪಟ್ಟಿಗಳಲ್ಲಿ ಈ ಕೆಳಕಂಡಂತೆ ದೃಢೀಕರಿಸಬೇಕು.

| ದೃಢೀಕರಣ |
|---|
| **" ಮೇಲ್ಕಂಡ ________ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಅಧಿಸೂಚನೆಯನ್ವಯ ಸೆಮಿಸ್ಟರ್ ಸ್ಕೀಂ ನ ವಿನಿಯಮದ ಪ್ರಕಾರ 03 ಮತ್ತು 05ನೇ ಸೆಮಿಸ್ಟರ್‌ಗೆ ಪ್ರವೇಶವನ್ನು ಹೊಂದಲು ಅರ್ಹತೆಹೊಂದಿರುತ್ತಾರೆಂದು ದೃಢೀಕರಿಸಲಾಗಿದೆ" ದೃಢೀಕರಣವನ್ನುಹಾಕಿ ಸಹಿಮಾಡಬೇಕು.** |

2) ಬಿ.ಎಸ್.ಡಬ್ಲ್ಯೂ ಪದವಿಯ 03 ಮತ್ತು 05ನೇ ಸೆಮಿಸ್ಟರ್ ಪದವಿಗೆ ಪ್ರವೇಶವನ್ನು ಹೊಂದಲು ವಿನಿಯಮದನ್ವಯ ಕ್ರಮ ಕೈಗೊಳ್ಳುವುದು.

3) ಪ್ರವೇಶಾನುಮೋದನೆಗಾಗಿ ಸಂಬಂಧಪಟ್ಟ ಕಾಲೇಜಿನವರು ಪ್ರತಿ ವಿದ್ಯಾರ್ಥಿಯ ಹೆಸರು ಮತ್ತು ಐಚ್ಛಿಕ ವಿಷಯ ಮತ್ತು ಭಾಷ ವಿವಿಧ ಶುಲ್ಕಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ತ್ರಿಪ್ರತಿಗಳಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದ **15 ದಿನಗೊಳಗಾಗಿ** ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಸದರಿ ವಿವರಗಳನ್ನೊಳಗೊಂಡ ಪಟ್ಟಿಯನ್ನು ಸಿದ್ಧಪಡಿಸಿ ಕಳುಹಿಸುವುದು ಕಾಲೇಜಿನ ಪ್ರಾಂಶುಪಾಲರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಮೂಲ ಅಂಕಪಟ್ಟಿಗಳು ಇಲ್ಲದೆ ಇದ್ದಲ್ಲಿ ಪ್ರವೇಶಾನುಮೋದನಾ ಪಟ್ಟಿಯನ್ನು ಸ್ವೀಕರಿಸಲಾಗುವುದಿಲ್ಲ. ಪ್ರತಿಯೊಂದು ಐಚ್ಛಿಕ ವಿಷಯ ಗುಚ್ಛಕ್ಕೆ ಕನಿಷ್ಠ 10 ವಿದ್ಯಾರ್ಥಿಗಳಿಗೆ ಕಡಿಮೆ ಇಲ್ಲದಂತೆ ಪ್ರವೇಶ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅಂತಹ ಪ್ರವೇಶಗಳನ್ನು ಅನುಮೊದಿಸಲಾಗುವುದಿಲ್ಲ.

4) ಪ್ರವೇಶಾನುಮೋದನಾ ಪಟ್ಟಿ ಹಾಗು ಇತರೆ ದಾಖಲಾತಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಕೂಲಂಕುಷವಾಗಿ ಪರಿಶೀಲಿಸಿ, ತಿದ್ದುಪಡಿಗಳು ಇಲ್ಲದಂತೆ ನಿಗಾ ವಹಿಸುವುದು. ಅಲ್ಲದೆ ತಮ್ಮ ಪತ್ರಗಳಲ್ಲಿ **ಕಣ್ತಪ್ಪಿನಿಂದಾಗಿ** ಎಂಬ ಪದವನ್ನು ಬಳಸಿ ತಿದ್ದುಪಡಿಗಾಗಿ ಅವಕಾಶವನ್ನು ಕೋರಿದಲ್ಲಿ ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
5) ಯಾವುದೇ ಪದವಿಗಳ ಪ್ರವೇಶಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪ್ರಾಂಶುಪಾಲರು ಪ್ರವೇಶಾತಿಗಾಗಿ ಶಿಫಾರಸ್ಸು ಪತ್ರವನ್ನು ಈ ಕಛೇರಿಗೆ ಕಳುಹಿಸಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಿದೆ.
6) ಈ ಸೂತ್ತೋಲೆಯೊಂದಿಗೆ ಲಗತ್ತಿಸಿರುವ, ಅನುಬಂಧ – 05 ಮತ್ತು 06ರ ಮಾದರಿ ನಮೂನೆಗಳಲ್ಲಿ ವಿದ್ಯಾರ್ಥಿಗಳ ಅಂಕಿ ಅಂಶಗಳ ವಿವರವನ್ನು ತಪ್ಪದೇ ಸಲ್ಲಿಸಬೇಕು.

7) ನಿಗದಿತ ನಮೂನೆಯಲ್ಲಿ ಪ್ರವೇಶಾನುಮೋದನಾ ಪಟ್ಟಿಯನ್ನು ತರಗತಿವಾರು/ ಕೋರ್ಸ್‌ವಾರು (ಬಿ.ಎ. : ಬಿ.ಎಸ್ಸಿ : ಬಿ.ಕಾಂ. : ಬಿ.ಬಿ.ಎ. : ಬಿ.ಸಿ.ಎ. : ಬಿ.ಎಸ್.ಡಬ್ಲ್ಯೂ ಹಾಗೂ ಬಿ.ಬಿ.ಎ. (ಟೂರಿಸಂ & ಟ್ರಾವೆಲ್) ಪ್ರತ್ಯೇಕವಾಗಿ ತಯಾರಿಸಿ ತ್ರಿಪ್ರತಿಯಲ್ಲಿ ಅನುಮೋದನೆಗಾಗಿ ಸಲ್ಲಿಸುವುದು. ಯಾವುದೇ ಕಾರಣಕ್ಕೂ ಒಂದೇ ಪ್ರವೇಶಾನುಮೊದನೆ ಪಟ್ಟಿಯಲ್ಲಿ ಕೋರ್ಸ್‌ವಾರು ಕಳುಹಿಸದಿರಲು ತಿಳಿಸಲಾಗಿದೆ.

8) ಬಡ ವಿದ್ಯಾರ್ಥಿ ನಿಧಿಯಿಂದ ಕೊಡಲಾಗುವ ಧನಸಹಾಯವನ್ನು ಸರ್ಕಾರದ ವಿದ್ಯಾರ್ಥಿವೇತನ ಪಡೆಯುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಪ್ರವರ್ಗ–1ರ ಹಾಗೂ ಪೇಮೆಂಟ್ ಕೋಟಾದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಇತರೆ ಮೂರು ಅರ್ಹ ವಿದ್ಯಾರ್ಥಿಗಳ ಹೆಸರುಗಳನ್ನು ದ್ವಿಪ್ರತಿಯಲ್ಲಿ ಭರ್ತಿಮಾಡಿ ಪ್ರವೇಶ ಪಡೆದ 01 ತಿಂಗಳ ಒಳಗಾಗಿ ಶಿಫಾರಸ್ಸಿನೊಂದಿಗೆ ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕು.(ವಿದ್ಯಾರ್ಥಿಗಳ ಬ್ಯಾಂಕ್ ಪಾಸ್ ಬುಕ್ ಫ್ರೆಂಟ್ ಫೇಜ್ ಜೆರಾಕ್ಸ್ ಪ್ರತಿ ಸಲ್ಲಿಸುವುದು.)

9) ಅನುಬಂಧ – 08ರಲ್ಲಿ ಮೊದಲ ವರ್ಷದ : ದ್ವಿತೀಯ ವರ್ಷದ : ತೃತೀಯ ವರ್ಷದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶುಲ್ಕ ವಿವರಗಳನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು(ಒಟ್ಟು ಮೊಬಲಗನ್ನು ಒಂದೇ ಚಲನ್‌ನಲ್ಲಿ ಪಾವತಿಸುವುದು).

ಮಾನ್ಯ ಕುಲಸಚಿವರ
ಅನುಮೋದನೆಯಾಗಿದೆ

(ಡಾ. ಧರಣಿ ಕುಮಾರ್ ಪಿ.)
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
...ಪು ವಿಶ್ವವಿದ್ಯಾನಿಲಯ
...ದ್ರಿ, ಶಂಕರಘಟ್ಟ–577451.
ಶಿವಮೊಗ್ಗ ಜಿಲ್ಲೆ.

03/05/15

# ANNEXURE-I

**STUDENTS ADMISSION APPROVAL LIST OF Ist SEMEMSTER DEGREE FOR THE ACADEMIC YEAR ~~2019-20~~ 2020-2021**

**(NAME OF THE COURSE: )**

*NAME OF THE COLLEGE:*

| Sl. No | Name of the Students | Cate-gory | Caste Name | Details of Eligibility for I semester Degree | | Combination & Languages | | Date of admission | Fees paid & Receipt No. | Fine Amount if any | Re-mark |
|---|---|---|---|---|---|---|---|---|---|---|---|
| | | | | | | Present Course | | | | | |
| | | | | Board | Reg.No.& Month/ Year of Passing | Language | Combi-nation | | | | |
| | | | | | | | | | | | |

Place:-

Date:--

**Signature of the Principal**
(with office Seal)

ಸೂಚನೆ:- ಕೋರ್ಸ್‌ವಾರು (ಬಿ.ಎ., ಬಿ.ಕಾಂ., ಬಿ.ಎಸ್ಸಿ., ಬಿ.ಸಿ.ಎ., ಬಿ.ಬಿ.ಎ. & ಬಿ.ಎಸ್.ಡಬ್ಲ್ಯೂ.) ಪ್ರತ್ಯೇಕವಾಗಿ ಪಟ್ಟಿಯನ್ನು ತಯಾರಿಸಿ ಕಳುಹಿಸುವುದು

# ANNEXURE-II

## STUDENT ADMISSION APPROVAL LIST OF II and III YEAR DEGREE (THIRD AND FIFTH SEMESTER) FOR THE ACADEMIC YEAR ~~2019-20~~ 2020 -2021

## (NAME OF THE COURSE: )

*NAME OF THE COLLEGE:*

| Sl. No. | Name of the Students | Category | Caste Name | Regn. No. | Combination & Languages | | Date of admission | Fee paid & Receipt No. | Fine Amount if any | Remarks |
|---|---|---|---|---|---|---|---|---|---|---|
| | | | | | Language | Combination | | | | |
| | | | | | | | | | | |

ಮೇಲ್ಕಂಡ ________..ವಿದ್ಯಾರ್ಥಿಗಳು ಸೆಮಿಸ್ಟರ್ ಸ್ಕೀಂನ ವಿನಿಯಮದ ಅಧಿಸೂಚನೆಯ ಸಂಖ್ಯೆ:ಕುವಿ:ಶೈವಿ:ಎಸಿ-5(56): :2015-16, ದಿನಾಂಕ: ರ ಪ್ರಕಾರ 3 ಮತ್ತು 5ನೇ ಸೆಮಿಸ್ಟರ್‌ಗೆ

ಪ್ರವೇಶಹೊಂದಲು ಅರ್ಹತೆ ಹೊಂದಿರುತ್ತಾರೆಂದು ದೃಢೀಕರಿಸಲಾಗಿದೆ.

Place:-
Date:--

Signature of the Principal
(with office Seal)

ಸೂಚನೆ:- ಕೋರ್ಸ್‌ವಾರು (ಬಿ.ಎ., ಬಿ.ಕಾಂ., ಬಿ.ಎಸ್ಸಿ., ಬಿ.ಸಿ.ಎ., ಬಿ.ಬಿ.ಎ. & ಬಿ.ಎಸ್.ಡಬ್ಲ್ಯೂ.) ಪ್ರತ್ಯೇಕವಾಗಿ ಪಟ್ಟಿಯನ್ನು ತಯಾರಿಸಿ ಕಳುಹಿಸುವುದು

## ANNEXURE-III

## TRANSFER ADMISSION DETAILS FOR THE ACADEMIC YEAR ~~2019-20~~ 2020-2021

*NAME OF THE COLLEGE:*

| Sl. No. | Name of the Students | Course/Year/ Semester | Language | combination | Transfer | | Date of Admission | Fee paid & Receipt No. |
|---|---|---|---|---|---|---|---|---|
| | | | | | From | To | | |
| | | | | | | | | |

Place:-
Date:-

**Signature of the Principal**
(with office Seal)

# ANNEXURE-IV

## CHANGE OF LANGUAGE / OPTIONAL DETAILS FOR THE ACADEMIC YEAR ~~2019-20~~ 2020-2021

*NAME OF THE COLLEGE:*

| Sl. No. | Name of the Student | Course/ Year | Present | | To be changed | | Date of Admission | Fee paid & Receipt No. |
|---|---|---|---|---|---|---|---|---|
| | | | Languages | Combination | Languages | Combination | | |
| | | | | | | | | |

Place:-
Date:-

**Signature of the Principal**
(with office Seal)

## ANNEXURE-V

## STATEMENT SHOWING THE CATEGORY WISE STUDENT STRENGTH FOR THE ACADEMIC YEAR ~~2019-20~~ 2021-2021

NAME AND ADDRESS OF THE COLLEGE:

| Sl. No | Course | SC | | ST | | I | | 2A | | 2B | | 3A | | 3B | | GM | | Minorities | | PH | | Others | | Total | | Grand Total |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | B | G | B | G | B | G | B | G | B | G | B | G | B | G | B | G | B | G | B | G | B | G | B | G | |
| 1 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 | 28 |
| 1 | I B.A. | | | | | | | | | | | | | | | | | | | | | | | | | |
| | II B.A. | | | | | | | | | | | | | | | | | | | | | | | | | |
| | III B.A. | | | | | | | | | | | | | | | | | | | | | | | | | |
| TOTAL | | | | | | | | | | | | | | | | | | | | | | | | | | |
| 2 | I B.COM | | | | | | | | | | | | | | | | | | | | | | | | | |
| | II B.COM | | | | | | | | | | | | | | | | | | | | | | | | | |
| | III B.COM | | | | | | | | | | | | | | | | | | | | | | | | | |
| TOTAL | | | | | | | | | | | | | | | | | | | | | | | | | | |
| 3 | I B.SC. | | | | | | | | | | | | | | | | | | | | | | | | | |
| | II B.SC. | | | | | | | | | | | | | | | | | | | | | | | | | |
| | III B.SC. | | | | | | | | | | | | | | | | | | | | | | | | | |
| TOTAL | | | | | | | | | | | | | | | | | | | | | | | | | | |
| 4 | I BBA | | | | | | | | | | | | | | | | | | | | | | | | | |
| | II BBA | | | | | | | | | | | | | | | | | | | | | | | | | |
| | IIIBBA | | | | | | | | | | | | | | | | | | | | | | | | | |
| TOTAL | | | | | | | | | | | | | | | | | | | | | | | | | | |
| 5 | Other courses, if any. (specify) | | | | | | | | | | | | | | | | | | | | | | | | | |
| TOTAL | | | | | | | | | | | | | | | | | | | | | | | | | | |
| GRAND TOTAL (SI No. 1+2+3+4+5) | | | | | | | | | | | | | | | | | | | | | | | | | | |

**B – Boys**
**G – Girls**

ವಿ.ಸೂ:

ಈ ಮೇಲ್ಕಂಡ ಅಂಕಿ ಅಂಶಗಳ ನಮೂನೆಯನ್ನು **Micro Soft Excel** ನಲ್ಲಿ ನಮೂದಿಸತಕ್ಕದ್ದು ಹಾಗೂ ಈ ನಮೂನೆಯ ವಿವರವನ್ನು ಶೈಕ್ಷಣಿಕ ವಿಭಾಗದ ಇ–ಮೇಲ್ ವಿಳಾಸಕ್ಕೆ (**kuvempuacademic@gmail.com**) ಕಳುಹಿಸಬೇಕು.

# ANNEXURE - VI

## STATEMENT SHOWING THE CATEGORY WISE STUDENT STRENGTH FOR THE ACADEMIC YEAR ~~2019-20~~ 2020-2021

NAME AND ADDRESS OF THE COLLEGE:

| Subjects | Name of the Course: B.A., | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | I Year | | II Year | | III Year | | SC | | ST | | GM | | IIA | | IIB | | IIIA | | IIIB | | Cat-I | |
| | B | G | B | G | B | G | B | G | B | G | B | G | B | G | B | G | B | G | B | G | B | G |
| History | | | | | | | | | | | | | | | | | | | | | | |
| Economics | | | | | | | | | | | | | | | | | | | | | | |
| Political Science | | | | | | | | | | | | | | | | | | | | | | |
| Sociology | | | | | | | | | | | | | | | | | | | | | | |
| Kannada | | | | | | | | | | | | | | | | | | | | | | |
| English | | | | | | | | | | | | | | | | | | | | | | |
| Kannada | | | | | | | | | | | | | | | | | | | | | | |
| Sanskrit | | | | | | | | | | | | | | | | | | | | | | |
| Hindi | | | | | | | | | | | | | | | | | | | | | | |
| Total | | | | | | | | | | | | | | | | | | | | | | |

| Subjects | Name of the Course: B.Sc. | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | I Year | | II Year | | III Year | | SC | | ST | | GM | | IIA | | IIB | | IIIA | | IIIB | | Cat-I | |
| | B | G | B | G | B | G | B | G | B | G | B | G | B | G | B | G | B | G | B | G | B | G |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| Total | | | | | | | | | | | | | | | | | | | | | | |

ವಿ.ಸೂ:

ಈ ಮೇಲ್ಕಂಡ ಅಂಕಿ ಅಂಶಗಳ ನಮೂನೆಯನ್ನು **Micro Soft Excel** ನಲ್ಲಿ ನಮೂದಿಸತಕ್ಕದ್ದು ಹಾಗೂ ಈ ನಮೂನೆಯ ವಿವರವನ್ನು ಶೈಕ್ಷಣಿಕ ವಿಭಾಗದ ಇ-ಮೇಲ್ ವಿಳಾಸಕ್ಕೆ (**kuvempuacademic@gmail.com**) ಕಳುಹಿಸಬೇಕು.

ANNEXURE-VII

## STATEMENT SHOWING THE YEAR WISE ADMISSIONS OF DISABILITIES STUDENTS

| Name of the course and year | Total Number of Students | Total No. of applications received from | | | | | | | | | | | | | |
|---|---|---|---|---|---|---|---|---|---|---|---|---|---|---|---|
| | | SC | | ST | | Category | | | | | | | | | |
| | | | | | | I | | 2A | | 2B | | 3A | | 3B | |
| 1 | 2 | 3 | | | | | | | | | | | | | |
| | | B | G | B | G | B | G | B | G | B | G | B | G | B | G |
| | | | | | | | | | | | | | | | |
| Total | | | | | | | | | | | | | | | |

Signature of the Principal
(with office Seal)

Place:-
Date:-

ವಿ.ಸೂ:

ಈ ಮೇಲ್ಕಂಡ ಅಂಕಿ ಅಂಶಗಳ ನಮೂನೆಯನ್ನು **Micro Soft Excel** ನಲ್ಲಿ ನಮೂದಿಸತಕ್ಕದ್ದು ಹಾಗೂ ಈ ನಮೂನೆಯ ವಿವರವನ್ನು ಶೈಕ್ಷಣಿಕ ವಿಭಾಗದ ಇ-ಮೇಲ್ ವಿಳಾಸಕ್ಕೆ (**kuvempuacademic@gmail.com**) ಕಳುಹಿಸಬೇಕು.

# ANNEXURE-VIII

## STUDENTS ADMISSION APPROVAL LIST OF DEGREE FOR THE ACADEMIC YEAR ~~2019~~-20 2020-2021

## (SEMEMSTER WISE)

*NAME OF THE COLLEGE:*

| Sl. No | Name of the Course | Semester | No. of Student | Languages | | | | | | | | Optional | | | | | | | | Re-marks |
|---|---|---|---|---|---|---|---|---|---|---|---|---|---|---|---|---|---|---|---|---|
| | | | | Kannada | | English | | Sanskrit | | Hindi | | | | | | | | | | |
| | | | | B | G | B | G | B | G | B | G | B | G | B | G | B | G | B | G | |
| 1 | | | | | | | | | | | | | | | | | | | | |
| 2 | | | | | | | | | | | | | | | | | | | | |
| 3 | | | | | | | | | | | | | | | | | | | | |

**Place:-**
**Date:--**

**Signature of the Principal**
(with office Seal)

Students Statistics Admit in B.A., B.Sc., B.Com., B.B.A. and Any Other Degree for the Academic Year 20~~18~~-19 -20

ವಿ.ಸೂ:

ಈ ಮೇಲ್ಕಂಡ ಅಂಕಿ ಅಂಶಗಳ ನಮೂನೆಯನ್ನು **Micro Soft Excel** ನಲ್ಲಿ ನಮೂದಿಸತಕ್ಕದ್ದು ಹಾಗೂ ಈ ನಮೂನೆಯ ವಿವರವನ್ನು ಶೈಕ್ಷಣಿಕ ವಿಭಾಗದ ಇ-ಮೇಲ್ ವಿಳಾಸಕ್ಕೆ **(kuvempuacademic@gmail.com)** ಕಳುಹಿಸಬೇಕು.

# KUVEMPU UNIVERSITY

***BILL FOR REFUND OF TUITION & OTHER FEES***

| Name Of the Institution | year | Particular of Fee Payment | | | Reason for of Refund | Adjustment if any | Net Amount Repayable | Remarks |
|---|---|---|---|---|---|---|---|---|
| | Course | Rs | Receipt/ D.D No | Date | | | Bank Name, IFSC Code and Account No. | |
| | | | | | | | | |

Rupees____________________________only.

Rs________________

Counter signed for

PRINCIPAL

Counter signed for

Rs____________________

REGISTRAR